C.R.P.67

Form No.4 (Civil)
Deposition Sheets
(R.P.No.57)

1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.115/2021

ದಿನಾಂಕಃ 28.03.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ :7 ಪಿ. ಡಬ್ಲ್ಯೂ :9

| | |
|---|---|
| ಸಾಕ್ಷಿದಾರರ ಹೆಸರು | ಲೋಕೇಶ |
| ತಂದೆಯ ಹೆಸರು | ವೆಂಕಟೇಶ |
| ವಯಸ್ಸು | 36 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕೃಷ್ಣಪುರ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ಸತೀಶ ಗೊತ್ತು, ಅವರು ಕೃಷ್ಣಪುರದಲ್ಲಿ ವಾಸ ಇದ್ದಾರೆ. ಸುಮಾರು 10 ವರ್ಷಗಳಿಂದ ವಾಸ ಇದ್ದಾರೆ. ಕೃಷ್ಣಪುರದಲ್ಲಿ ಚಾಸಾ.1 ಬೋರೆಗೌಡರ ಮನೆಯ ಪಕ್ಕ ಬಾಡಿಗೆಗೆ ವಾಸ ಇದ್ದರು. ಚಾಸಾ.2 ರವರು ಬಾಡಿಗೆಗೆ ಇದ್ದ ಮನೆಯಲ್ಲಿ ಚಾಸಾ.2 ಮತ್ತು ಅವರ ತಾಯಿ ವಾಸ ಇದ್ದರು. ಚಾಸಾ.2 ರವರ ತಾಯಿ ಬೆಂಗಳೂರಿನಲ್ಲಿ ಏನೋ ಕೆಲಸ ಮಾಡುತ್ತಾರೆ. ಕೃಷ್ಣಪುರದಲ್ಲಿ ಚಾಸಾ.2 ರವರ ಜಮೀನು ಮತ್ತು ತೋಟ ಇದೆ, ಆದ್ದರಿಂದ ಅವರು ಕೃಷ್ಣಪುರದಲ್ಲಿ ವಾಸ ಇರುತ್ತಿದ್ದರು. ಜಮೀನಿನಲ್ಲಿ ತೆಂಗಿನ ತೋಟ ಮತ್ತು ಖಾಲಿ ಜಾಗ ಇದೆ. ಆರೋಪಿ ದಿಲೀಪ ಗೊತ್ತು. ಆರೋಪಿ ಬೆಂಗಳೂರಿನಿಂದ ಕೃಷ್ಣಪುರಕ್ಕೆ ಬಂದು ಹೋಗುತ್ತಿದ್ದರು. ಆರೋಪಿಯ ತಂದೆಯ ಊರು ಕೃಷ್ಣಪುರ ಆಗಿದ್ದಕ್ಕೆ ಆರೋಪಿ ಕೃಷ್ಣಪುರಕ್ಕೆ ಬಂದು ಹೋಗುತ್ತಿದ್ದರು. ಚಾಸಾ.2 ರವರ ಅಣ್ಣನ ಮಗ ಹೊಡೆದಿದ್ದರು ಅಂತ ಕೇಸು ಹಾಕಿದ್ದರು. ರಾತ್ರಿ 11.00 ಗಂಟೆಯಾಗಿತ್ತು, ಆಗ ಚಾಸಾ.1 ರವರ ಮನೆಯ ಹತ್ತಿರದಿಂದ ಚೀರಾಡುವ ಶಬ್ದ ಕೇಳಿಸುತ್ತಿತ್ತು, ಆಗ ನಾನು ಮತ್ತು ಊರಿನವರಾದ ನಾರಾಯಣ, ನಾಗರಾಜ ಅಲ್ಲಿಗೆ ಹೋದೆವು. ಚಾಸಾ.2 ಸತೀಶರವರ ಬಲಕೈನ ಮೊಣಕೈಗೆ ಏಟಾಗಿತ್ತು.

ನಾನು ಆಂಬ್ಯುಲೆನ್ಸ್ ಗೆ ಫೋನ್ ಮಾಡಿದೆನು. ಚಾಸಾ.2 ರವರನ್ನು ಆಂಬ್ಯುಲೆನ್ಸ ನಲ್ಲಿ ಎ.ಸಿ.ಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು, ನರ ಕಟ್ ಆಗಿದೆ, ಹೊಲಿಗೆ ಹಾಕಲು ಆಗುವುದಿಲ್ಲ , ಬೆಂಗಳೂರಿಗೆ ಕರೆದುಕೊಂಡು ಹೋಗಿ ಎಂದರು. ಬೆಂಗಳೂರಿನ ಲಕ್ಷ್ಮಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಚಾಸಾ.2 ರವರ ತಾಯಿ ಬೆಂಗಳೂರಿನಿಂದ ಲಕ್ಷ್ಮಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬಂದಿದ್ದರು. ಚಾಸಾ.2 ರವರ ತಾಯಿಗೆ ವಿಷಯವನ್ನು ತಿಳಿಸಿದೆವು, ವಾಪಾಸ್ಸು ನಮ್ಮ ಊರಿಗೆ ಬಂದೆವು. ಸತೀಶ( ಚಾಸಾ.2) ನನಗೆ, ಅವರ ಅಣ್ಣನ ಮಗ ಜವಳಿ ಕುಡುಗೋಲಿನಿಂದ ತಲೆಗೆ ಹೊಡೆಯಲಿಕ್ಕೆ ಬಂದಿದ್ದನು, ಆಗ ಕೈಯನ್ನು ಅಡ್ಡ ಕೊಟ್ಟಿದ್ದರಿಂದ ಕೈಗೆ ಏಟಾಗಿ ರಕ್ತ ಬಂದಿತ್ತು, ದಿಲೀಪ ಕೈಗೆ ಸಿಗಲಿಲ್ಲ, ಓಡಿ ಹೋಗಿದ್ದನು. ಜಮೀನಿನ ವಿಚಾರದಲ್ಲಿ ದಿಲೀಪ ಕಾಯಿ ಕಿತ್ತುಕೊಂಡಿದ್ದ ವಿಚಾರದಲ್ಲಿ , ಇನ್ನೂ ಭಾಗ ಆಗಿಲ್ಲದೆ ಇದ್ದುದರಿಂದ , ಸಂಜೆ 4.00 ಗಂಟೆಗೆ ಜಗಳ ಆಗಿತ್ತು ಅಂತ ಸತೀಶ( ಚಾಸಾ.2) ನನಗೆ ಹೇಳಿದರು. ದಿಲೀಪ, ಸತೀಶ( ಚಾಸಾ.2) ರವರಿಗೆ ಸಾಯಂಕಲ ಬರುತ್ತೇನೆ, ನಿನ್ನನ್ನು ನೋಡಿಕೊಳ್ಳುತ್ತೇನೆ ಅಂತ ಹೇಳಿದ್ದನಂತೆ , ಆವಾಗ ರಾತ್ರಿ ಬಂದು ಈ ತರ ಮಾಡಿದ್ದಾನಂತೆ . ಘಟನೆ ಆಗಿದ್ದ ದಿನಾಂಕ 04.06.2020 ಆಗಿತ್ತು. ಪೊಲೀಸರು ಘಟನೆ ಬಗ್ಗೆ ನನ್ನನ್ನು ವಿಚಾರಣೆ ಮಾಡಿದರು, ನಾನು ಹೇಳಿಕೆಯನ್ನು ಕೊಟಿಟದ್ದೇನೆ. ಆರೋಪಿ ದಿಲೀಪನನ್ನು ನೋಡಿದರೆ ಗುರುತಿಸುತ್ತೇನೆ (ಆರೋಪಿ ಈ ದಿವಸ ನ್ಯಾಯಾಲಯಕ್ಕೆ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಸಲ್ಲಿಸಿದ್ದ ಹಾಜರಾತಿ ವಿನಾಯಿತಿ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿದೆ).

<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಎನ್.ಎನ್. ವಕೀಲರು, ಅನಾರೋಗ್ಯ ಇರುವ ಕಾರಣ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು, ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.